# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

**ಸಿಸಿ ನಂಃ 226 ಃ 2012**

ಪಿಡಬ್ಲೂ:4
ಸಿಡ್ಲೂ ಃ 13

| | |
|---|---|
| ಸಾಕ್ಷಿಯ ಹೆಸರು | ಃ ತೋಪನಗೌಡಾ |
| ತಂದೆಯ ಹೆಸರು | ಃ ಶಂಕರಗೌಡಾ ಪಾಟೀಲ |
| ವಯಸ್ಸು | ಃ 62 ವರ್ಷ |
| ಉದ್ಯೋಗ | ಃ ಒಕ್ಕಲುತನ |
| ವಾಸ ಸ್ಥಳ | ಃ ಎಲಿಗಾರ ಓಣಿ ಹೊಸಾಯಲ್ಲಾಪೂರ ಧಾರವಾಡ |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ 27–10–2016

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ

ನಾನು 1990 ರಿಂದ 2000 ರ ವರೆಗೆ ಎರಡು ಚುನಾವಣೆ ಅವಧಿಯಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಗೆ 9 ಮತ್ತು 10ನೇ ವಾರ್ಡ ಧಾರವಾಡ ಕ್ಕೆ ಮಹಾನಗರ ಸಭೆಗೆ ಆಯ್ಕೆಯಾಗಿದ್ದೆ . ತಿಂಗಳ ಕೊನೆಯ ವಾರದಲ್ಲಿ ಸಾಮಾನ್ಯವಾಗಿ ನಮ್ಮ ಮಹಾನಗರ ಸಭೆಯ ಜನರಲ್ ಬಾಡಿ ಮಿಟಿಂಗ್ ಆಗಿರುತ್ತದೆ.

2. 2000 ಇಸ್ವಿಯಲ್ಲಿ ನಮ್ಮ ಪಾಲಿಕೆಯಲ್ಲಿ ತುಂಡು ಗುತ್ತಿಗೆ ಕಾಮಗಾರಿ ಅಡಿಯಲ್ಲಿ ಕೆಲಸ ಮಾಡದೇ ಅದಕ್ಕೆ ಸಂಬಂಧಿಸಿದ ಬಿಲ್ ಪಾಸ್ ಆಗಿ ಹಣ ಸಂದಾಯವಾಗುತ್ತಿದ್ದರ ಬಗ್ಗೆ ನನ್ನ ಗಮನಕ್ಕೆ ಬಂದಿತ್ತು. ಅದರ ಕುರಿತು ನಾನು ಜನರಲ್ ಮಾರ್ಚ್ 2000 ಇಸ್ವಿಯಲ್ಲಿ ಬಾಡಿ ಮಿಟಿಂಗ್‌ನಲ್ಲಿ ಚರ್ಚೆ ಮಾಡಿ ಅದರ ಬಗ್ಗೆ ಕ್ರಮ ಕೈಗೊಳ್ಳಲು ವಿನಂತಿಸಿಕೊಂಡಿದ್ದೆ. ಸದರಿ ವಿಷಯ ಕುರಿತು ಉಳಿದ ಸದಸ್ಯರು ಕೂಡಾ ನನಗೆ ಬೆಂಬಲ ಸೂಚಿಸಿದರು. ಅದರಂತೆ ಸದರಿ ವಿಷಯದ ಕುರಿತು ಕೂಲಂಕುಷವಾಗಿ ವಿಚಾರಣೆ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಕುರಿತು ಅಗಸ್ಟ 2000 ಇಸ್ವಿಯ ಜನರಲ್ ಮಿಟಿಂಗ್‌ನಲ್ಲಿ ಮಾತುಕತೆ ಆಯಿತು. ಅದರಂತೆ ನಮ್ಮ ಮಹಾನಗರ ಪಾಲಿಕೆಯ ಆಯುಕ್ತರು ಮತ್ತು ಅಧೀಕ್ಷಕ ಅಭಿಯಂತರರು ಕ್ರಮ ಕೈಗೊಳ್ಳು ಕುರಿತು ಭರವಸೆ ನೀಡಿದ್ದರು. ಅದರಂತೆ ಕ್ರಮ ಕೈಗೊಂಡಿದ್ದರ ಬಗ್ಗೆ ಕೇಳಿ ಹಾಗೂ ದಿನಪತ್ರಿಕೆಯ ಮೂಲಕ ಗೊತ್ತಾಯಿತು.

3. ಈ ಮೇಲೆ ಹೇಳಿದ ಅಕ್ರಮ ಬಿಲ್‌ಗಳು ಈ ಪ್ರಕರಣದ 8ನೇ ಆರೋಪಿ ಮತ್ತು ಇನ್ನೊಬ್ಬ ಮೇಸ್ತ್ರಿ ಅನ್ನುವ ವ್ಯಕ್ತಿಗಳ ಹೆಸರಿಗೆ ಪಾಸ ಆದ ಕುರಿತು ಮಾಹಿತಿ ಬಂದಿತ್ತು. ಈ ಪ್ರಕರಣದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

ಸಿಸಿ ನಂಃ **226 ಃ 2012**
ಪಿಡಬ್ಲ್ಯೂ ಃ **4**

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>

**4.** ಸದರಿ ಮೇಲೆ ಹೇಳಿದ ಕಾಮಗಾರಿ ಕುರಿತು ಟೆಂಡರ್ ಕರೆಯುವ ಹಂತದಿಂದ ಹಿಡಿದು ಬಿಲ್ ಪಾಸ್ ಮಾಡುವ ಹಂತದ ವರೆಗೆ ಯಾವ್ಯಾವ ಪ್ರಕ್ರಿಯೆಗಳು ನಡೆಯುತ್ತಿದ್ದರ ಬಗ್ಗೆ ವೈಯಕ್ತಿಕ ಮಾಹಿತಿ ಇದ್ದ ಬಗ್ಗೆ ಸಾಕ್ಷಿಗೆ ಕೇಳಲು ಸಾಕ್ಷಿಯು ಗೊತ್ತಿದೆ ಅಂತಾ ಹೇಳಿ ರುತ್ತಾರೆ . ಈ ಪ್ರಕರಣದ 8ನೇ ಆರೋಪಿ ಕುರಿತು ಟೆಂಡರ್ ಎಕ್ಸೆಪ್ಟ ಆಗಿದ್ದರ ಬಗ್ಗೆ ಮತ್ತು ಇತರ ಪ್ರಕ್ರಿಯೆಗಳ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ ಎಂದರೆ ಸರಿ . ಅದರಂತೆ ಪ್ರತಿಯೊಂದು ಹಂತದಲ್ಲಿ ಸದರಿ ಪ್ರಕ್ರಿಯೆಗಳಿಗೆ ಸಂಬಂಧಿಸಿ ದಾಖಲೆಗಳನ್ನು ಯಾವ್ಯಾವ ಅಧಿಕಾರಿಗಳು ತಯಾರಿಸಿ ಅವುಗಳನ್ನು ಈ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳುತ್ತಾರೆ ಎಂಬ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಅದರಂತೆ ಈ ಪ್ರಕರಣದ ಆರೋಪಿತರು ಯಾವ್ಯಾವ ಹುದ್ದೆಯಲ್ಲಿ ಯಾವ್ಯಾವ ತರಹದ ಅಧಿಕಾರ ಹೊಂದಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂಬ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ . ಅದರಂತೆ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಜಿ ಬಿ ಮಿಟಿಂಗ್‌ನಲ್ಲಿ ನನಗೆ ಸದರಿ ಕೃತ್ಯದ ಕುರಿತು ಯಾವುದೇ ಮಾಹಿತಿ ಇರಲಿಲ್ಲ ಮತ್ತು ಅದರ ಬಗ್ಗೆ ಪ್ರಸ್ತಾವನೆ ಕೂಡಾ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆದರೂ ಕೂಡಾ ಚಾಸಾ–1 ರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಕಾಗದ ಪತ್ರಗಳ ಬಗ್ಗೆ ನಾನೇನು ವೈಯಕ್ತಿಕ ಮಾಹಿತಿ ಪಡೆದುಕೊಂಡಿಲ್ಲ ಎಂದರೆ ಸರಿ .

<u>ಮರು ವಿಚಾರಣೆಃ</u> ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.